ಏಸು ಕಾಯಂಗಳ ಕಳೆದು ಎಂಭತ್ನಾಲ್ಕು ಲಕ್ಷ ಜೀವ ರಾಶಿಯನ್ನು ದಾಟಿ ಬಂದ ಈ ಶರೀರ ।
ತಾನಲ್ಲ ತನದಲ್ಲ ಆಸೆ ತರವಲ್ಲ ಮುಂದೆ ಬಾಹೋದಲ್ಲ ದಾಸನಾಗು ವಿಶೇಷನಾಗು ॥

ಆಶ ಕ್ಲೇಶ ದೋಷವೆಂಬ ಅರ್ಥಿಯೊಳು ಮುಳುಗಿ ಯಮನ ಪಾಶಕ್ಕೊಳಗಾಗದೆ ನಿರ್ದೋಷಿಯಾಗು ಸಂತೋಷಿಯಾಗು ।
ಕಾಶಿ ವಾರಣಾಸಿ ಕಂಚಿ ಕಾಳಹಸ್ತಿ ರಾಮೇಶ್ವರ ಏಸು ದೇಶ ತಿರುಗಿದರು ಬಾಹೊದೇನು ಅಲ್ಲಿಗ್ ಹೋದೇನು ।
ದೋಷನಾಶ ಕೃಷ್ಣವೇಣಿ ಗಂಗೆ ಗೋದವರಿ ಭವ ನಾಶಿ ತುಂಗಭದ್ರೆ ಯಮುನೆ ವಾಸದಲ್ಲಿ ಉಪವಾಸದಲ್ಲಿ ।
ಮೀಸಲಾಗಿ ಮಿಂದು ಜಪ ತಪ ಹೋಮ ನೇಮಗಳ ಏಸು ಬಾರಿ ಮಾಡಿದರು ಫಲವೇನು ಈ ಛಲವೇನು ॥

ಅಂದಿಗೊ ಇಂದಿಗೊ ಒಮ್ಮೆ ಸಿರಿ ಕಮಲೇಶನನ್ನು ಒಂದು ಬಾರಿಯಾರು ಹಿಂದ ನೆನೆಯಲಿಲ್ಲ ಮನ ದಣಿಯಲಿಲ್ಲ ।
ಬಂದು ಬಂದು ಭ್ರಮೆಗೊಂಡು ಮಾಯಾ ಮೋಹಕ್ಕೆ ಸಿಕ್ಕಿ ನೊಂದು ಬೆಂದು ಒಂದರಿಂದ ಉಳಿಯಲಿಲ್ಲ ದ್ವಂದ್ವ ಕಳಿಯಲಿಲ್ಲ ।
ಸಂದೇಹವ ಮಾಡದಿರು ಅರಿವು ಎಂಬ ದೀಪವಿಟ್ಟು ಇಂದು ಕಂಡ್ಯ ದೇಹದಲ್ಲಿ ಪಿಂಡಾಂಡ ಹಾಗೆ ಬ್ರಂಹ್ಮಾಂಡ ।
ಇಂದು ಹರಿಯ ಧ್ಯಾನವನ್ನು ಮಾಡಿ ವಿವೇಕದಿ ಮುಕುಂದನಿಂದ ಮುಕ್ತಿ ಬೇಡುಕಂಡ್ಯ ನೀ ನೋಡು ಕಂಡ್ಯ ॥

ಮೂರುಬಾರಿ ಶರಣು ಮಾಡಿ ನೀರ ಮುಳುಗೊಲ್ಯಾಕೆ ಪರನಾರಿಯರ ನೋಟಕೆ ಗುರಿಯ ಮಾಡಿದಿ ಮನಸೆಳೆಯ ಮಾಡಿದಿ ।
ಸುರೆಯೊಳು ಸುರೆ ತುಂಬಿ ಮೇಲೆ ಹೂವಿನ ಹಾರ ಗೀರು ಗಂಧ ಅಕ್ಷತೆಯ ಧರಿಸಿದಂತೆ ನೀ ಮೆರೆಸಿದಂತೆ ।
ಗಾರುಡಿಯ ಮಾತ ಬಿಟ್ಟು ನಾದ ಬ್ರಹ್ಮನ ಪಿಡಿದು ಸಾರಿ ಸುರಿ ಮುಕ್ತಿಯನ್ನು ಶಮನದಿಂದ ಮತ್ತೆ ಸುಮನದಿಂದ ।
ನಾರಾಯಣ ಅಚ್ಯುತ ಅನಂತಾದಿ ಕೇಶವನ ಸಾರಾಮೃತವನ್ನು ಉಂಡು ಸುಖಿಸೊ ಲಂಡ ಜೀವವೆ ಎಲೊ ಭಂಡ ಜೀವವೇ ॥

Esu kAyaMgaLa kaLedu eMbhatnAlku lakSha jIva rASiyannu dATi baMda I SarIra |
tAnalla tanadalla Ase taravalla muMde bAhOdalla dAsanAgu viSEShanAgu ||

ASa klESa dOShaveMba arthiyoLu muLugi yamana pASakkoLagAgade nirdOShiyAgu saMtOShiyAgu |
kASi vAraNAsi kaMci kALahasti rAmESvara Esu dESa tirugidaru bAhodEnu allig hOdEnu |
dOShanASa kRuShNavENi gaMge gOdavari bhava nASi tuMgabhadre yamune vAsadalli upavAsadalli |
mIsalAgi miMdu japa tapa hOma nEmagaLa Esu bAri mADidaru phalavEnu I CalavEnu ||

aMdigo iMdigo omme siri kamalESanannu oMdu bAriyAru hiMda neneyalilla mana daNiyalilla |
baMdu baMdu bhramegoMDu mAyA mOhakke sikki noMdu beMdu oMdariMda uLiyalilla dvaMdva kaLiyalilla |
saMdEhava mADadiru arivu eMba dIpaviTTu iMdu kaMDya dEhadalli piMDAMDa hAge braMhmAMDa |
iMdu hariya dhyAnavannu mADi vivEkadi mukuMdaniMda mukti bEDukaMDya nI nODu kaMDya ||

mUrubAri SaraNu mADi nIra muLugolyAke paranAriyara nOTake guriya mADidi manaseLeya mADidi |
sureyoLu sure tuMbi mEle hUvina hAra gIru gaMdha akShateya dharisidaMte nI meresidaMte |
gAruDiya mAta biTTu nAda brahmana piDidu sAri suri muktiyannu SamanadiMda matte sumanadiMda |
nArAyaNa acyuta anaMtAdi kESavana sArAmRutavannu uMDu sukhiso laMDa jIvave elo bhaMDa jIvavE ||